150 ನೇ ಅಧಿವೇಶನ (24)

# ಕರ್ನಾಟಕ ವಿಧಾನ ಪರಿಷತ್

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್ ಮಂಜೇಗೌಡ ಇವರು ನಿಯಮ 330 ರಡಿ ಕೋರಿರುವ ಗಮನ ಸೆಳೆಯುವ ಸೂಚನೆ ಪ್ರಶ್ನೆಗೆ ಉತ್ತರ

"ವೃದ್ಧರು , ವಿಧವೆ, ವಿಶೇಷ ಚೇತನರು ಹೀಗೆ ವಿವಿಧ ವರ್ಗದವರಿಗೆ ಮಾಸಿಕ ಪಿಂಚಣಿ ನೀಡುವ ಸಾಮಾಜಿಕ ಭದ್ರತಾ ಯೋಜನೆಯಲ್ಲಿ ನಕಲಿ ಆಧಾರ್ ಮೂಲಕ ಒಬ್ಬರಿಗೆ ಎರಡೆರಡು ಬಾರಿ ಪಿಂಚಣಿ ಕೊಟ್ಟಿರುವ ಸಂಗತಿ ಹೊರಬಂದಿದೆ . ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ನೀಡಿರುವ ಮಾಹಿತಿಯಂತೆ ರಾಜ್ಯದಲ್ಲಿ **39000** ನಕಲಿ ಆಧಾರ್ ಕಾರ್ಡ್ ಪ್ರಕರಣಗಳು ಇದೇ ಎಂದು ತಿಳಿದುಬಂದಿದೆ. ಇದನು ಪರಿಶೀಲಿಸಿ ಒಬ್ಬ ಫಲಾನುಭವಿ ಎರಡೆರಡು ಪಿಂಚಣಿಯನು ಪಡೆಯುತ್ತಿದ್ದರೆ ಸರಿಯಾದ ಮಾಹಿತಿಯುಳ್ಳ ಪ್ರಕರಣ ಉಳಿಸಿಕೊಂಡು ಇನ್ನೊಂದನು ರದ್ದು ಮಾಡಬೇಕಾಗಿದೆ. ಒಂದುವೇಳೆ ಸರ್ಕಾರ ತಪ್ಪಿದ್ದಲ್ಲಿ ಫಲಾನುಭವಿಗಳಿಗೆ ಅನಾನುಕೂಲವಾಗುತ್ತದೆ ಎಂಬ ವಿಷಯವನ್ನು ಮಾನ್ಯ ಮಾಹಿತಿ ತಂತ್ರಜ್ಞಾನ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

### ಉತ್ತರ

ಸರ್ಕಾರದಿಂದ ನೀಡಲಾಗುತ್ತಿರುವ ಸೌಲಭ್ಯ/ ಸವಲತ್ತುಗಳನು ನೇರ ಹಣ ಸಂದಾಯ ಯೋಜನೆಯಡಿ ತರುವ ನಿಟ್ಟಿನಲ್ಲಿ , ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳಡಿ ವಿವಿಧ ಪಿಂಚಣಿ ಪಡೆಯುತ್ತಿರುವ ಎಲ್ಲಾ ಫಲಾನುಭವಿಗಳ ಆಧಾರ್ ಸಂಖ್ಯೆ ಬ್ಯಾಂಕ್/ಅಂಚೆ ಖಾತೆ ವಿವರ ನೀಡುವುದನು ಕಡ್ಡಾಯಗೊಳಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್ ಡಿ /153/ ಡಿ.ಎಸ್.ಪಿ/ 2014 /1069, ರ ದಿನಾಂಕ: 23/10/2017 ರಲ್ಲಿ ಆದೇಶ ಹೊರಡಿಸಲಾಗಿದೆ.

ಪ್ರಸ್ತುತ ನಾಡಕಚೇರಿಯ ದತ್ತಾಂಶವು UIDAI ರವರೊಂದಿಗೆ ಅನುಕಲನಗೊಂಡಿರುವ ಹಿನ್ನಲೆಯಲ್ಲಿ ಅರ್ಜಿದಾರರು ಪಿಂಚಣಿ ಕೋರಿ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀಡುವ ಆಧಾರ್ ಸಂಖ್ಯೆಯನು ನಮೂದಿಸಿದಂತೆ, ಆಧಾರ್ ಸಂಖ್ಯೆಯ ನೈಜತೆಯ ಪರಿಶೀಲನೆ ಜೊತೆಗೆ UIDAI ರವರ ದತ್ತಾಂಶದಲ್ಲಿ ಲಭ್ಯವಿರುವ ಅರ್ಜಿದಾರರ ಮೂಲಭೂತ ಮಾಹಿತಿಯನು ಪಡೆಯಲಾಗುತ್ತಿದೆ. ಅಂತೆಯೇ ನಿಖರವಾದ ಆಧಾರ್ ಸಂಖ್ಯೆ ಹಾಗೂ ಅರ್ಜಿದಾರರ ವಿವರವನು ಖಚಿತಪಡಿಸಿಕೊಂಡು ಪಿಂಚಣಿ ಯೋಜನೆಯ ಅರ್ಜಿಗಳನು ಸ್ವೀಕರಿಸುತ್ತಿರುವುದರಿಂದ ಯಾವುದೇ ನಕಲಿ ಆಧಾರ್ ಕಾರ್ಡ್ ನೀಡಿ ಯೋಜನೆಗಳ ಸೌಲಭ್ಯ ಪಡೆಯಲು ಸಾಧ್ಯವಿರುವುದಿಲ್ಲ.

ಮುಂದುವರೆದು, ಫಲಾನುಭವಿ ದತ್ತಾಂಶದಲ್ಲಿನ ಎಲ್ಲಾ ಫಲಾನುಭವಿಗಳಿಗೆ ಆಧಾರ್ ಸಂಖ್ಯೆಯನು ನಮೂದಿಸುವಾಗ UIDAI ದತ್ತಾಂಶದೊಂದಿಗೆ ಮೌಲೀಕರಣಗೊಳಿಸಿ Update ಮಾಡಲಾಗುತ್ತಿದೆ. ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳಡಿ ಪಿಂಚಣಿ ಸೌಲಭ್ಯ ಪಡೆಯಲು ಆಧಾರ್ ಸಂಖ್ಯೆಯನು ಕಡ್ಡಾಯಗೊಳಿಸಿದ ಪೂರ್ವದಲ್ಲಿ ಫಲಾನುಭವಿಗಳ ನಿಖರವಾದ ಆಧಾರ್ ಸಂಖ್ಯೆಯನು ಗುರುತಿಸಲು ತಂತ್ರಾಂಶದಲ್ಲಿ ಯಾವುದೇ ಸೇವೆಗಳು ಲಭ್ಯವಿಲ್ಲದಿದ್ದರಿಂದ ಒಂದೇ ಆಧಾರ್ ಸಂಖ್ಯೆಯನು ನೀಡಿ ಒಂದಕಿಂತ ಹೆಚ್ಚಿನ ಪಿಂಚಣಿಗಳನು ಫಲಾನುಭವಿಗಳು ಪಡೆದಿರುವ ಅವಕಾಶವಿತ್ತು. ಅದರಂತೆ ಫಲಾನುಭವಿ ದತ್ತಾಂಶದಲ್ಲಿ ನಮೂದಾದ ಪ್ರಕರಣಗಳಲ್ಲಿ Aadhar Duplicate ಆಗಿದ್ದ ಒಟ್ಟು 89795 ಪ್ರಕರಣಗಳನ್ನು ಗುರುತಿಸಿ 2020 ರಲ್ಲಿ ರದ್ದುಗೊಳಿಸಲಾಗಿರುತ್ತದೆ.

ಫಲಾನುಭವಿಗಳನು ನಿಖರವಾಗಿ ಗುರುತಿಸುವ ನಿಟ್ಟಿನಲ್ಲಿ ಆಧಾರ್ ಮಾಹಿತಿಯನು ಕಡ್ಡಾಯಗೊಳಿಸಿದ್ದು ಶೇ 100 ಪ್ರಗತಿ ಸಾಧಿಸುವಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ : ಡಿಎಸ್ ಎಸ್ ಪಿ ಎಂಐ ಎಸ್ ಸಿ 56/2022 ದಿನಾಂಕ: 15.09.2022 ರ ಗಡುವು ನಿಗಧಿಪಡಿಸಿ ಈ ಕುರಿತಂತೆ ಫಲಾನುಭವಿಗಳ ಮಾಹಿತಿಗಾಗಿ ವ್ಯಾಪಕ ಪ್ರಚಾರವನು ಪತ್ರಿಕಾ ಮಾಧ್ಯಮ/ ಅಂತರ್ಜಾಲ ಮುಖಾಂತರ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ / ಸ್ಥಳೀಯ ಮಟ್ಟದಲ್ಲಿ ಮೊಡುವ ಮೂಲಕ ಈ ಪ್ರಕ್ರಿಯೆಯನು ಪೂರ್ಣಗೊಳಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನಗಳನು ನೀಡಲಾಗಿರುತ್ತದೆ. ಅಲ್ಲದೇ ನಿರ್ದೇಶನಾಲಯದ ವತಿಯಿಂದ ಸಹ ಈ ಕುರಿತಂತೆ ಪ್ರಮುಖ ದಿನಪತ್ರಿಕೆಗಳಲ್ಲಿ ಹಾಗೂ ನಿರ್ದೇಶನಾಲಯದ ವೆಬ್ ಸೈಟ್ ನಲ್ಲಿ ಪ್ರಚಾರ ಪಡಿಸಲಾಗಿದೆ. ರಾಜ್ಯಾದ್ಯಂತ ರೇಡಿಯೋ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ .

ದಿನಾಂಕ: 15/09/2022 ರ ನಂತರ ಆಧಾರ್ ಜೋಡಣೆಗೆ ಬಾಕಿಯಿದ್ದ ಹಾಗೂ ಇ.ಎಂ.ಓ ಮೂಲಕ ಪಿಂಚಣಿ ಪಡೆಯುತ್ತಿದ್ದ ಒಟ್ಟು 145859 ಫಲಾನುಭವಿಗಳ ಪಿಂಚಣಿಯನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು. ಅಂತಹ ಪ್ರಕರಣಗಳಲ್ಲಿ ಫಲಾನುಭವಿಗಳು ತಮ್ಮ ಆಧಾರ್ ಮತ್ತು ಬ್ಯಾಂಕ್ / ಅಂಚೆ ಖಾತೆ ವಿವರಗಳನು ಸಲ್ಲಿಸಿದ ನಂತರ ಸಂಬಂಧಪಟ್ಟ ತಹಶೀಲ್ದಾರರು ಪಿಂಚಣಿ ಮರುಚಾಲನೆಗೊಳಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

ತಾತ್ಕಾಲಿಕವಾಗಿ ಸ್ಥಗಿತಗೊಂಡ ಪ್ರಕರಣಗಳನು ಮರುಚಾಲನೆಗೊಳಿಸಿದ ನಂತರ ಅಂತಹ ಪ್ರಕರಣಗಳಲ್ಲಿ ಆ ಅವಧಿಯ ಪಿಂಚಣಿಯನು ಬಾಕಿ ರೂಪದಲ್ಲಿ ಪಾವತಿಸಲು ಅವಕಾಶ ನೀಡಿದೆ. ಇದುವರೆವಿಗೂ 68072 ಫಲಾನುಭವಿಗಳಿಂದ ಆಧಾರ್ ಮತ್ತು ಬ್ಯಾಂಕ್/ ಅಂಚೆ ಖಾತೆ ಮಾಹಿತಿ ಜೋಡಣೆಯೊಂದಿಗೆ ಪಿಂಚಣಿ ಮರುಚಾಲನೆಗೊಳಿಸಿ ತಹಶೀಲ್ದಾರರು ಕ್ರಮವಹಿಸಿರುತಾರೆ. 23178 ಫಲಾನುಭವಿಗಳ ಪಿಂಚಣಿಯನು ಮರಣ/ವಲಸೆ/ಅನರ್ಹ ಕಾರಣಗಳಿಂದ ರದ್ದುಗೊಳಿಸಲಾಗಿದೆ. 54609 ಫಲಾನುಭವಿಗಳ ಪಿಂಚಣಿಯು ಕಡ್ಡಾಯ ಮಾಹಿತಿ ಲಭ್ಯವಿಲ್ಲದೇ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ, ಮಾಹಿತಿ ಸಂಗ್ರಹಣೆಯೊಂದಿಗೆ ಮರುಚಾಲನೆಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ರಾಜ್ಯದಲ್ಲಿ ಒಟ್ಟು 39689 ಇಂತಹ Duplicate Aadhar ಮತ್ತು Name Mismatch ಪ್ರಕರಣಗಳನು ಗುರುತಿಸಲಾಗಿದೆ. ಈ ಪೈಕಿ NAME MATCH, ADDRESS MATCH ಇರುವಂತಹ 12,444 ಪ್ರಕರಣಗಳನ್ನು ಕೇಂದ್ರೀಕೃತವಾಗಿ ರದ್ದುಗೊಳಿಸಲು ನಿರ್ದೇಶನಾಲಯದಡಿ ಕ್ರಮವಹಿಸಲಾಗಿರುತ್ತದೆ. ಉಳಿದಂತೆ 27245 Duplicate ಆಧಾರ್ ಪ್ರಕರಣಗಳನ್ನು ಪರಿಶೀಲಿಸಿ ನಿಖರವಾದ ಆಧಾರ್ ಸಂಖ್ಯೆಯನ್ನು ನಮೂದಿಸಲು ತಾಲ್ಲೂಕುಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ.

ಒಂದೇ ಕುಟುಂಬದ ಸದಸ್ಯರು ಹಲವು ಪಿಂಚಣಿ ಯೋಜನೆಗಳಡಿ ಸೌಲಭ್ಯ ಪಡೆಯುತ್ತಿರುವ ಸಂದರ್ಭದಲ್ಲಿ ಒಂದೇ ಆಧಾರ್ ಸಂಖ್ಯೆಯು ಜೋಡಣೆಯಾಗಿರುವುದು ಗಮನಕ್ಕೆ ಬಂದಿದ್ದು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಪರಿಶೀಲಿಸಿ ಸರಿಪಡಿಸಲು ಕ್ರಮವಹಿಸಲಾಗುತ್ತಿದೆ

ಒಂದೇ ಆಧಾರ್ ನಂಬರ್ ಒಂದಕ್ಕಿಂತ ಹೆಚ್ಚು ಫಲಾನುಭವಿಗೆ ಜೋಡಣೆಯಾಗಿರುವ ಪ್ರಕರಣಗಳಲ್ಲಿ, ಫಲಾನುಭವಿಗಳು ಒಬ್ಬರೇ ಆಗಿದ್ದಲ್ಲಿ ಅರ್ಹ ಪಿಂಚಣಿಯನ್ನು ತಾಲ್ಲೂಕು ಮಟ್ಟದಲ್ಲಿ ಮುಂದುವರೆಸಿ ಅನರ್ಹ ಪಿಂಚಣಿಯನ್ನು ರದ್ದುಗೊಳಿಸಲಾಗುತ್ತಿದೆ ಹಾಗೂ ಎರಡೂ ಪ್ರಕರಣಗಳಲ್ಲಿ ಬೇರೆ ಬೇರೆ ಫಲಾನುಭವಿಯಾಗಿದ್ದಲ್ಲಿ, ಸರಿಯಾದ ಆಧಾರ್ ಸಂಖ್ಯೆ ಇರುವ ಪಿಂಚಣಿಯನ್ನು ಉಳಿಸಿಕೊಂಡು, ತಪ್ಪಾಗಿ ಜೋಡಣೆಯಾಗಿರುವ ಆಧಾರ್ ಪ್ರಕರಣದಲ್ಲಿ ಫಲಾನುಭವಿಗಳಿಂದ ಆಧಾರ್ ದೃಢೀಕರಣದ ಕುರಿತು ಒಪ್ಪಿಗೆ ಪತ್ರವನ್ನು ಪಡೆದು ನಿಖರವಾದ ಆಧಾರ್ ಸಂಖ್ಯೆಯನ್ನು ನಮೂದಿಸಿ ಮಾಹಿತಿ ಸರಿಪಡಿಸಲು ಕ್ರಮವಹಿಸಲಾಗುತ್ತಿದೆ

ಜಿಲ್ಲಾಮಟ್ಟದಲ್ಲಿ ಕ್ರಮವಹಿಸಲಾಗುತ್ತಿರುವ Duplicate Aadhar ಮತ್ತು Name Mismatch ಒಟ್ಟು 27245 ಪ್ರಕರಣಗಳಲ್ಲಿ ನಿಖರವಾದ ಆಧಾರ್ ಸಂಖ್ಯೆಯನ್ನು ನಮೂದಿಸಿ 7990 ಪ್ರಕರಣಗಳಲ್ಲಿ ನಿಖರವಾದ ಮಾಹಿತಿ ಅಳವಡಿಸಲಾಗಿದೆ .ಆಧಾರ್ ಸಂಖ್ಯೆಯ ಮಾಹಿತಿ ಲಭ್ಯವಿಲ್ಲದ 3935 ಪ್ರಕರಣಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ. ಉಳಿದಂತೆ 8349 Duplicate Aadhar ಪ್ರಕರಣಗಳು ಬಾಕಿ ಇದ್ದು ತಾಲ್ಲೂಕು ಮಟ್ಟದಲ್ಲಿ ಪರಿಶೀಲಿಸಿ ಸರಿಪಡಿಸಲು ಕ್ರಮವಹಿಸಲಾಗುತ್ತಿದೆ

ಕಡತಸಂಖ್ಯೆ: **DSSP/LA/LCQ/12/23**

(ಶ್ರೀ ಕೃಷ್ಣಬೈರೇಗೌಡ)

ಕಂದಾಯ ಸಚಿವರು